ಅ) 960

ಇ) ಈಗಾಗಲೇ ಭರ್ತಿ ಮಾಡಿರುವ ಕಪ್ಪು ಹಲಗೆ ಕಾರ್ಯಾಚರಣೆಯ ನಾಲ್ಕನೇ ಹಂತದ ಹುದ್ದೆಗಳು ಶಿಗ್ಗಾಂವ ಮತ್ತು ಸವಣೂರಿನಲ್ಲಿ ಇರಲಿಲ್ಲವಾದ್ದರಿಂದ ಹೆಚ್ಚು ಹುದ್ದೆಗಳು ಖಾಲಿಯಿರಲು ಕಾರಣವಾಗಿದೆ.

ಈ) ಧಾರವಾಡ ಜಿಲ್ಲೆಯಲ್ಲಿ ತೆರವಿರುವ ಹುದ್ದೆಗಳ ಪೈಕಿ 58 ಹುದ್ದೆಗಳನ್ನು ತುಂಬಲಾಗುತ್ತಿದೆ. ಇದರಲ್ಲಿ ಸವಣೂರು ತಾಲ್ಲೂಕಿನ 24 ಹುದ್ದೆಗಳು ಸೇರಿವೆ. ಇನ್ನು 674 ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳಡಿಯಲ್ಲಿ ಆದಷ್ಟು ಬೇಗನೆ ತುಂಬಲಾಗುವುದು.

## ಸೋಮವಾರಪೇಟೆ ತಾಲ್ಲೂಕಿನ ಶಾಲಾ ಕಟ್ಟಡಗಳನ್ನು ದುರಸ್ತಿಗೆ ಹಣ ಬಿಡುಗಡೆ

**294 (608)** ಶ್ರೀ ಎ.ಎಸ್. ಬೆಳ್ಳಿಯಪ್ಪ (ಸೋಮವಾರಪೇಟೆ):-

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೋಮವಾರಪೇಟೆ ತಾಲ್ಲೂಕು ಮಲೆನಾಡು ಪ್ರದೇಶವಾಗಿದ್ದು, ಅಲ್ಲಿ ತುಂಬಾ ಮಳೆ ಬೀಳುವುದರಿಂದ ಶಾಲಾ ಕಟ್ಟಡಗಳು ಹಾಳಾಗಿ ಬೀಳುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಶಾಲಾ ಕಟ್ಟಡಗಳ ದುರಸ್ತಿಗೆ ಹಣವನ್ನು ಯಾವಾಗ ಮಂಜೂರು ಮಾಡಲಾಗುವುದು ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-

ಅ) ಹೌದು.

ಆ) ಜಿಲ್ಲಾ ಪರಿಷತ್ತು ಕೊಡಗು ಜಿಲ್ಲೆ ಇವರ ಮೂಲಕ ಸೋಮವಾರಪೇಟೆ ತಾಲ್ಲೂಕು ಪ್ರಾಥಮಿಕ ಶಾಲಾ ಕಟ್ಟಡಗಳ ದುರಸ್ತಿಗಾಗಿ ಪ್ರತಿವರ್ಷ ಹಣ ಬಿಡುಗಡೆ ಮಾಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡಗಳ ದುರಸ್ತಿಗಾಗಿ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಲಾಗಿದೆ.

| | |
|---|---|
| 1990–91 | ರೂ. 3.16 ಲಕ್ಷಗಳು |
| 1991–92 | ರೂ. 10.00 ಲಕ್ಷಗಳು |
| 1992–93 | ರೂ. 6.00 ಲಕ್ಷಗಳು |

## Veterinary Hospitals in Bangalore City

**296 (328)** Sri R. Dayananda Rao (Gandhinagar):-

Will the Minister of State for Animal Husbandry by pleased to state.

a) the total No. of Veterinary Hospitals/Dispensaries in Bangalore City;

b) the Total No. of Animals in Bangalore City;